೩೧ ಶ್ರೀ ಗಣೇಶ ದೇವಸ್ಥಾನ, ಸುಲ್ತಾನಪೇಟೆ

೩೨ ಶ್ರೀ ಕಾಶೀ ವಿಶ್ವೇಶ್ವರ ಸ್ವಾಮಿ ದೇವಸ್ಥಾನ, ಬಳೇಪೇಟೆ

೩೩ ಶ್ರೀ ಕುಮಾರಸ್ವಾಮಿ ದೇವಸ್ಥಾನ, ಹನುಮಂತನಗರ

೩೪ ಶ್ರೀ ಕಾಳಿಕಾ ಕಾಮಟೇಶ್ವರಿ ದೇವಸ್ಥಾನ ನಗರ್ತರಪೇಟೆ

೩೫ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಕೋಟೆ

೩೬ ಶ್ರೀ ಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಟೆ

೩೭ ಶ್ರೀ ಮಿಂಟೋ ಆಂಜನೇಯಸ್ವಾಮಿ ದೇವಸ್ಥಾನ. ಮಿಂಟೋ ಆಸ್ಪತ್ರೆ ಹತ್ತಿರ

೩೮ ಶ್ರೀ ರಾಮೇಶ್ವರ ಕಲ್ಯಾಣ ಮಂಟಪ, ಚಾಮರಾಜಪೇಟೆ

೩೯ ಶ್ರೀ ಪ್ರಳಯ ಕಾಲದ ವೀರಭದ್ರಸ್ವಾಮಿ ದೇವಸ್ಥಾನ, ಗವೀಪುರ ಗುಟ್ಟಹಳ್ಳಿ

೪೦ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, ಸೀತಾಪತಿ ಅಗ್ರಹಾರ

೪೧ ಶ್ರೀ ಜಲಕಂಟೇಶ್ವರ ಸ್ವಾಮಿ ದೇವಸ್ಥಾನ, ಕಲಾಸಿಪಾಳ್ಯ

೪೨ ಶ್ರೀ ಪಟಾಲಮ್ಮ ದೇವಸ್ಥಾನ ಜಯನಗರ

೪೩ ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನ, ಆಲಸೂರು ಪೇಟೆ

೪೪ ಶ್ರೀ ಚೌಬೀನ ಸುಬ್ಬರಾವ್ ಚಾರಿಟೀಸ್, ಚಾಮರಾಜಪೇಟೆ

೪೫ ಶ್ರೀ ಕರೀಕಲ್ಲು ಆಂಜನೇಯ ಸ್ವಾಮಿ ದೇವಸ್ಥಾನ, ಮೈಸೂರು ರಸ್ತೆ

೪೬ ಶ್ರೀ ರಾಯ ರಾಯ ಛತ್ರ, ಕೆ. ಆರ್. ರಸ್ತೆ.

೪೭ ಶ್ರೀ ಗವಿಗಂಗಾಧರಸ್ವಾಮಿ ಹಾಗೂ ಗುಡ್ಡದ ಆಂಜನೇಯಸ್ವಾಮಿ ದೇವಸ್ಥಾನ

೪೮ ಶ್ರೀ ಸಿದ್ಧಾಪುರ ಸೋಮೇಶ್ವರ ಸ್ವಾಮಿ ದೇವಸ್ಥಾನ ಮತ್ತು ಆಂಜನೇಯ ಸ್ವಾಮಿ ದೇವಸ್ಥಾನ, ಲಾಲ್‌ಬಾಗ್

೪೯ ಶ್ರೀ ಕಟ್ಟೆ ವಿನಾಯಕ ದೇವಸ್ಥಾನ, ಶಿವಿನ್ಯೂ ರಸ್ತೆ

೫೦ ಶ್ರೀ ಮಹಿಷಮರ್ದಿನಿ ದೇವಸ್ಥಾನ, ನಗರ್ತರಪೇಟೆ

೫೧ ಶ್ರೀ ತಿಮ್ಮಮ್ಮ ಚಾರಿಟೀಸ್

೫೨ ಶ್ರೀ ರಾಮೇಶ್ವರ ದೇವಸ್ಥಾನ, ಚಾಮರಾಜಪೇಟೆ

೫೩ ಶ್ರೀ ವಿನಾಯಕ ವೆಂಕಟರಮಣ ರೈಲ್ವೇ ಕಾಲೋನಿ.

ಚಾಮರಾಜನಗರ ತಾಲ್ಲೂಕಿನ ಚಂದಕವಾಡಿ ಹೋಬಳಿ ಪುಟ್ಟನಪುರ ಗ್ರಾಮದ ಕೆಲವು ಸರ್ವೆ ನಂಬರ್‌ನ ಕಾಲು ದಾರಿಗಳನ್ನು ಕೆಲವು ವ್ಯಕ್ತಿಗಳು ಅಕ್ರಮ ಬೇಲಿ ಹಾಕಿರುವ ಬಗ್ಗೆ

೧೨೯. ಶ್ರೀಮತಿ ಸಂಪಾ ವಸಂತ (ವಿರಾಜಪೇಟೆ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ಚಾಮರಾಜನಗರ ತಾಲ್ಲೂಕು ಚಂದಕವಾಡಿ ಹೋಬಳಿ ಪುಟ್ಟನಪುರ ಗ್ರಾಮದ ಸರ್ವೆ ನಂ. ೬, ೭, ೮ ಮತ್ತು ೯ರ ಕಾಲು ದಾರಿಗಳನ್ನು ಕೆಲವು ವ್ಯಕ್ತಿಗಳು ಅಕ್ರಮವಾಗಿ ಅತಿಕ್ರಮಿಸಿ ಬೇಲಿ ಹಾಕಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೨ ಈ ಬಗ್ಗೆ ಚಾಮರಾಜನಗರ ತಹಸೀಲ್ದಾರ್‌ರವರು ದಿನಾಂಕ ೩೦.೩.೧೯೯೯ರಂದು ಕಾಲು ದಾರಿಗಳಿಗೆ ಬೇಲಿ ಹಾಕಿರುವ ವ್ಯಕ್ತಿಗಳಿಗೆ ಬೇಲಿಯನ್ನು ತೆರವು ಮಾಡುವಂತೆ ನೋಟೀಸು ನೀಡಿರುವುದು ನಿಜವೇ ?

೩ ಹಾಗಿದ್ದಲ್ಲಿ ಈವರೆಗೂ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು ?

ಶ್ರೀ ಆಜೀಜ್ ಸೇಠ್(ಕಂದಾಯ ಮಂತ್ರಿಗಳು).—

೧ ಬಂದಿದೆ.

೨ ಹೌದು

೩ ಈ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಂಡಿದೆ. ಸಂಬಂಧಿಸಿದ ಒತ್ತುವರಿದಾರರಿಗೆ ದಿನಾಂಕ ೩೧.೩.೧೯೯೯ರಂದು ನೋಟೀಸ್ ಕೊಟ್ಟಿರುವುದು ನಿಜ ಇದೆ. ಹಾಗೂ ಸದರಿ ಪುಟ್ಟಸಪುರದ ಗ್ರಾಮದ ಸ. ನಂ. ೬, ೭ ರ ಪಿತ್ತು ೯ರ ಕಾಲುದಾರಿಯನ್ನು ಒತ್ತುವರಿ ಮಾಡಿರುವುದನ್ನು ದಿನಾಂಕ ೮.೯.೯೯ರಂದು ಒತ್ತುವರಿದಾರರಿಂದ ಖಿಲ್ಲ ಮಾಡಿಸಿ ಜನ, ಜಾನುವಾರುಗಳು ತಿರುಗಾಡಲು ವ್ಯವಸ್ಥೆ ಮಾಡಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ನೇಕಾರರಿಗೆ ವಸತಿ ಸೌಲಭ್ಯ

೧೬೨. ಶ್ರೀ ಶಿವಶೇಖರಗೌಡ ಶಿರವಾಳ, (ಶಹಾಪುರ).—ಮಾನ್ಯ ಬಂದರು ಮತ್ತು ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರಕಾರದವರು ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ನೇಕಾರರಿಗೆ ವಸತಿ ಸೌಲಭ್ಯ ಒದಗಿಸಲು ಜಮೀನನ್ನು ವಶಪಡಿಸಿಕೊಂಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಸದರಿ ಜಮೀನಿನ ಮಾಲೀಕರಿಗೆ ಹಣ ನೀಡಲಾಗಿದೆಯೇ ?

ಇ) ಡಚ್ ಯೋಜನೆಯ ಮೂಲಕ ನೇಕಾರರಿಗೆ ಸದರಿ ಗ್ರಾಮದಲ್ಲಿ ಮನೆಗಳನ್ನು ನಿರ್ಮಿಸುವ ಯೋಜನೆ ಬಹಳ ಕಾಲದಿಂದಲೂ ಕಾರ್ಯಗತವಾಗದಿರುವುದಕ್ಕೆ ಕಾರಣಗಳೇನು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು ಮತ್ತು ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಡಚ್ ಯೋಜನೆಯ ೨ನೇ ಹಂತದ ಬಗ್ಗೆ ಇನ್ನೂ ಅಂತಿಮವಾಗಿ ತೀರ್ಮಾನ ತೆಗೆದುಕೊಂಡಿರುವುದಿಲ್ಲ.

ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು ಇಳಿಸುವ

೧೬೩. ಶ್ರೀ ಸುಮಾ ವಸಂತ (ವೀರಾಜಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೬ಕ್ಕೆ ಇಳಿಸಲು ಸರ್ಕಾರವು ಯೋಚಿಸುತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಸರ್ಕಾರಿ ನೌಕರರ ಸೇವಾ ನಿವೃತ್ತಿ ವಯಸ್ಸನ್ನು ಈಗಿನ ೫೮ ವರ್ಷಗಳಿಂದ ೫೫ ವರ್ಷಗಳಿಗೆ ಇಳಿಸಬೇಕೆಂದು ಕೋರಿ ಅನೇಕ ಮನವಿಗಳು ಬರುತ್ತಿವೆ. ಈ ಕೋರಿಕೆಗಳು ವಿಶೇಷವಾಗಿ ಬಹುಪಾಲು ಸುಶಿಕ್ಷಿತ ನಿರುದ್ಯೋಗಿ ಯುವಜನರಿಂದ ಬಂದಂಥವುಗಳಾಗಿವೆ. ಸರ್ಕಾರವು ಈ ವಿಷಯವನ್ನು ಎಲ್ಲಾ ದೃಷ್ಟಿಕೋನಗಳಿಂದ ಎಚ್ಚರಿಕೆಯಿಂದ ಪರ್ಯಾಲೋಚಿಸಬಯಸುತ್ತದೆ.

ಮೈಕೋ ಗೃಹ ನಿರ್ಮಾಣ ಸಂಘಕ್ಕಾಗಿ ಭೂಸ್ವಾಧೀನ ಬಗ್ಗೆ

೧೬೪. ಶ್ರೀ ಬಿ. ರಾಮನಾಥ್ ರೈ (ಬಂಟವಾಳ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ, ನಾಯನಪ್ಪತೆಟ್ಟಿ ಪಾಳ್ಯದ ಸರಹದ್ದಿನಲ್ಲಿರುವ ಸರ್ವೆ ನಂಬರುಗಳು ಮತ್ತು ಮೈಕೋ ನೌಕರರ ಗೃಹ ನಿರ್ಮಾಣ ಸಂಘಕ್ಕಾಗಿ ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ?